**ಇಂದು ದಿನಾಂಕ***:06.01.2024* **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಸಿ.ಎನ್. ವಕೀಲರಿಂದಃ</u>**

ನಿ.ಪಿ.21 ಯಾವ ವರ್ಷದ ದಾಖಲೆ ಗೊತ್ತಿಲ್ಲ. ನಿ.ಪಿ.20 ದಿನಾಂಕಃ 06-04-1985 ರ ಕ್ರಯ ಪತ್ರ ಇರುತ್ತದೆ. ನಿ.ಪಿ.18 ಕ್ರಯ ಪತ್ರ 1976-77 ನೇ ಸಾಲಿನದು ಇರುತ್ತದೆ. ನಿ.ಪಿ.19 ಕ್ರಯ ಪತ್ರ 1985 ನೇ ಸಾಲಿನದು ಇರುತ್ತದೆ. ನಿ.ಪಿ.17 ಯಾವ ಸಾಲಿನದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದು 2004 ರಿಂದ 2022 ನೇ ಸಾಲಿನ ದಾಖಲೆ ಎನ್ನುತ್ತಾರೆ. ಸಾಕ್ಷಿ ನಿ.ಪಿ.17 ರಲ್ಲಿ ಅದನ್ನು ಬರೆದಿಲ್ಲ ಎನ್ನುತ್ತಾರೆ. ಪಕ್ಕಾ ಪೋಡಿ ನಂತರ ಸರ್ವೆ ನಂ.47, ಸರ್ವೆ ನಂ.71 ಆಗಿರುತ್ತದೆ. ಪಕ್ಕಾ ಪೋಡು 2014 ರಿಂದ 2016 ರಲ್ಲಿ ಆಗಿದೆ. ಅದರ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ಪ್ರತಿವಾದಿಯ ಹೆಸರಿನಲ್ಲಿ ಇರುವ ಜಮೀನನ್ನು ಕಬಳಿಸಲು ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿರುವ ತಿಳುವಳಿಕೆ ಪತ್ರ , ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರಗಳಲ್ಲಿ ಸುಳ್ಳು ಅಂಶಗಳನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರಿಂದ 25 ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.22 ರಿಂದ 25 ಯಾವ ವರ್ಷದ ದಾಖಲೆ ಹೇಳಲು ಆಗುವುದಿಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**